"ಬೇಡ ಅಪ್ಪ, ಈ ವಿಷಯದಲ್ಲಿ ನನಗೆ ಬಲವಂತ ಮಾಡಬೇಡಿ. ಅಲ್ಲಿ ಆಫೀಸ್‌ನಲ್ಲಿ ಅವರು, ಇಲ್ಲಿ ನೀವು" ಎಂದಳು ಕೋಪದಿಂದ. "ಸಂಜೀವ್ ಒಳ್ಳೆಯವರು. ನಿನ್ನ ಒಳಿತನ್ನು ಬಯಸೋರು" ಅಂದರು.

"ಅದಕ್ಕೆ ಅಪ್ಪ ಈ ನೋವು. ಬೇರೆಯವರು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ರೆ, ಸರಿಯಾಗಿ ಉತ್ತರ ಕೊಡ್ತಾ ಇದ್ದೆ. ಸಂಜೀವ್ ಆಗಿದಕ್ಕೆ ಏನು ಮಾತನಾಡೋಕೆ ಆಗ್ತಾ ಇಲ್ಲ. ಈ ಅವಕಾಶ ತಗೊಂಡು ನಿಮ್ಮನ್ನ ಡಿಸ್ಟರ್ಬ್ ಮಾಡಿದ್ದಾರೆ" ಎಂದಳು ಸ್ರವಂತಿ. "ಅಯ್ಯೋ, ಇಲ್ಲಮ್ಮಾ" ಅಪ್ಪ ಮತ್ತೇನೋ ಹೇಳುವ ಮೊದಲೇ,

"ಆ ವಿಷಯ ಬಿಟ್ಟು ಬಿಡು ಅಪ್ಪ" ಎಂದಳು. ನಂತರ ಅಮ್ಮನ ಕಡೆ ತಿರುಗಿ "ಅಮ್ಮ ನಿನಗೋಸ್ಕರ ಫಿಜಿಯೋಥೆರಪಿಸ್ಟ್ ಬಳಿ ಮಾತಾಡಿದ್ದೀನಿ. ನಾಡಿದ್ದು ಬರ್ತಾರೆ" ಎಂದು ಅಮ್ಮನ ತಲೆ ಸವರಿದಳು. ಪಾರ್ಶ್ವವಾಯುವಿನಿಂದ ದೇಹದ ಆಕಾರ ಪಕ್ಕಕ್ಕೆ ಸರಿದು ಹೋದ ಅಮ್ಮ 'ನನ್ನ ಬಗ್ಗೆ ಚಿಂತೆ ಬಿಡು ಕಂದಾ, ಅಪ್ಪ ಹೇಳೋ ಮಾತು ಕೇಳು' ಅಂತ ಹೇಳಿದಳು ಅರ್ಥವಾಗದ ಮಾತಿನಿಂದ.

"ಅಮ್ಮಾ, ಇದೆಲ್ಲಾ ಯೋಚನೆ ಮಾಡಿ, ತಲೆ ಕೆಡಿಸಿಕೊಳ್ಳಬೇಡ" ಎಂದು ಎದ್ದು ತನ್ನ ರೂಮಿನೊಳಗೆ ಬಂದಳು ಸ್ರವಂತಿ.

ಮಾರನೇ ದಿನ ಮತ್ತೆ ಕಾಫಿ ಡೇನಲ್ಲಿ ಚರ್ಚೆ.



"ಅವಳು ತುಂಬ ಹಟಮಾರಿ. ನನ್ನ ಮಾತು ಕೇಳ್ಲಿಲ್ಲ, ಕೊನೆಗೂ ಅವರಮ್ಮ ಹೇಳಿ ನೋಡಿದ್ರು" ಎಂದರು ಕೃಷ್ಣಮೂರ್ತಿ ವಿಷಾದದಿಂದ. "ನೀವು ಚಿಂತೆ ಮಾಡಬೇಡಿ ಅಂಕಲ್. ಇವತ್ತು ಆಫೀಸ್‌ನಲ್ಲಿ ಮತ್ತೊಂದು ಸಲ ನಾನು ಕನ್ವಿನ್ಸ್ ಮಾಡ್ತೀನಿ" ಎಂದ ಸಂಜೀವ್.

ಆಫೀಸಿನಲ್ಲಿ ಸಂಜೀವ್ ಟೇಬಲ್ ಬಳಿ ಹೋಗಿ "ದಯವಿಟ್ಟು, ಈ ರಾಯಭಾರ ಕೆಲಸ ಮಾಡೋದು ಬಿಡಿ" ಎಂದಳು. "ಆಫೀಸ್ ಮುಗಿದ್ಮೇಲೆ ಕಾಫಿ ಡೇನಲ್ಲಿ ಮೀಟ್ ಆಗೋಣ" ಎಂದ ಸಂಜೀವ್.

"ಬೇಡ."

"ಪ್ಲೀಜ್" ಮನವಿ ಮಾಡಿಕೊಂಡ. ಕೊನೆಗೂ ಒಪ್ಪಿಕೊಂಡಳು.

"ಆದರೆ, ಒಂದು ಕರಾರು, ವರ್ಗಾವಣೆ ಮಾಡಿಸಿಕೊಳ್ಳಲ್ಲ ಅಂತ ಮಾತುಕೊಡಿ. ಆಗ ಮಾತನಾಡ್ತೀನಿ" ಎಂದಳು.

ಒಂದು ಕ್ಷಣ ಸ್ರವಂತಿಯನ್ನು ನೋಡಿ "ಡನ್" ಎಂದ.

ಸಾಯಂಕಾಲ ಯಥಾ ಪ್ರಕಾರ ಆಫೀಸ್ ಮುಗಿದಮೇಲೆ ಕಾಫಿ ಡೇನಲ್ಲಿ ಮಾತಿಗಿಳಿದರು.

"ಸಂಜೀವ್, ಬಿ ಪ್ರಾಕ್ಟಿಕಲ್, ಅಮ್ಮ ಬೆಡ್ ರಿಡನ್.